**ಸಾಕ್ಷಿಯನ್ನು ಇಂದು ದಿನಾಂಕಃ 11.08.2023 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ವಿ.ಇ. ವಕೀಲರಿಂದ.**

ನಾನು ವಾದಿ ಮನೆತನದಲ್ಲಿ ಯಾವಾಗಿನಿಂದ ಎಲ್ಲಿಯವರೆಗೆ ಕೆಲಸ ಮಾಡಿರುವ ಬಗ್ಗೆ ದಾಖಲಾತಿಗಳು ಇರುತ್ತದೆ. ಸಾಕ್ಷಿ ಮತ್ತೇ ಪ್ರಶ್ನೆ ಕೇಳಿದಾಗ ಇರುವುದಿಲ್ಲ ಎಂದು ಹೇಳುತ್ತಾರೆ. ನಾನು ರೂ.3000/- ಗಳಿಗೆ ಖರೀದಿ ಮಾಡಿದ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ರೂ.3000/- ಗಳಿಗೆ ಖರೀದಿ ಮಾಡಿದ ಬಗ್ಗೆ ದಾಖಲಾತಿಗಳನ್ನು ವಕೀಲರಿಗೆ ನೀಡಿರುತ್ತೇನೆ. ನಾನು ರೂ.3000/- ಗಳಿಗೆ 40 ವರ್ಷಗಳ ಹಿಂದೆ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿದ ಪ್ರಕಾರ ನನ್ನ ಹೆಸರಿಗೆ ಮ್ಯೂಟೇಶನ ಅಗಿರುತ್ತದೆ. 40 ವರ್ಷಗಳ ಹಿಂದೆ ಮ್ಯೂಟೇಶನ ಅಗಿರುತ್ತದೆ, ಇದರ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ದಾಖಲಾತಿಗಳನ್ನು ವಕೀಲರಿಗೂ ನೀಡಿರುತ್ತೇನೆ. ನಾನು 40 ವರ್ಷಗಳ ಹಿಂದೆ ರೂ.3000/- ಗಳಿಗೆ ಆಸ್ತಿ ಖರೀದಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖರಿದಿ ಪ್ರಕಾರ ನನ್ನ ಹೆಸರಿಗೆ ಮ್ಯೂಟೇಶನ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಗೊತ್ತಿಲ್ಲದಂತೆ ಕಂದಾಯ ಅಧಿಕಾರಿಗಳೊಂದಿಗೆ ಮಿಲಾಪೆಯಾಗಿ ಪಹಣಿ ಪತ್ರಿಕೆಗಳನ್ನು ಬದಲಾಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕಂದಾಯ ದಾಖಲೆಗಳಲ್ಲಿ ಒಬ್ಬನ ಹೆಸರು ತೆಗೆದು ಮತ್ತೊಬ್ಬನ ಹೆಸರು ಸೇರಿಸುವಾಗ ತಹಸಿಲ್ದಾರರವರು ಆದೇಶ ಮಾಡುತ್ತಾರೆ ಎಂದರೆ ಸರಿ. ಅದರಂತೆ ಪಹಣಿ ಪತ್ರಿಕೆಗಳನ್ನು ನನ್ನ ಹೆಸರು ಬದಲಾವಣೆ ಅಗಲು ತಹಸಿಲ್ದಾರ ಕಡೆಯಿಂದ ಯಾವುದೇ ಆದೇಶ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು 9 ಲಕ್ಷಕ್ಕೆ 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ. ನಿಪಿ-6 ರಲ್ಲಿ ರೂ.1,47,000/- ಗಳಿಗೆ 1 ನೇ ಪ್ರತಿವಾದಿಗೆ ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿ ಅದು ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ನಾನು 1 ನೇ ಪ್ರತಿವಾದಿಯಿಂದ ರೂ.1,47,000/- ಗಳನ್ನು ತೆಗೆದುಕೊಂಡು ಮಾರಾಟ ವಾಡಿರುತ್ತೇನೆ ಎಂದು ಬರೆದಿರುವ ಅಂಶ ಸುಳು ಇರುತ್ತದೆ. 1 ನೆ ಪ್ರತಿವಾದಿ ನನಗೆ ಖರೀದಿ ಹಣವನ್ನು ನಗದು ರೂಪದಲ್ಲಿ ನೀಡಿರುತ್ತಾರೆ. ನಿಪಿ-6 ರಲ್ಲಿ ನಾನು 9 ಲಕ್ಷ ರುಪಾಯಿಗಳಿಗೆ ಮಾರಾಟ ಮಾಡಿರುತ್ತೇನೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ನಾನು 9 ಲಕ್ಷ ರೂ.ಗಳಿಗೆ ಮಾರಾಟ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ನಾವು ಎಷ್ಟು ಹಣಕ್ಕೆ ವ್ಯವಹಾರ ಮಾಡಿರುತ್ತಿವೋ ಅಷ್ಟಕ್ಕೆ ಸ್ಟಾಂಪ ಡ್ಯೂಟಿ ಕಟ್ಟಬೇಕಾಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಮಾರಾಟ ಮಾಡಿದವರಿಗೆ ತಹಸೀಲ್ ಕಚೇರಿಯಿಂದ ನೋಟಿಸ್ಸು ಕಳುಹಿಸುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸಬ ರಜಿಸ್ಟ್ರಾರ ಕಚೇರಿಯಲ್ಲಿ ಮಾರಾಟ ಮಾಡುವವರಿಗೆ ಹಾಗೂ ಖರಿದಿ ಮಾಡುವವರಿಗೆ ಕರೆದು ಭಾವಚಿತ್ರ ತೆಗೆದು ನೊಂದಣಿ ಮಾಡುತ್ತಾರೆ ಎಂದರೆ ಸಾಕ್ಷಿ ನಾನು ಖರೀದಿ ಮಾಡಿದಾಗ ಈ ಪ್ರಕ್ರಿಯೇ ಇರಲಿಲ್ಲ ಮಾರಾಟ ಮಾಡಿ ಪಹಣಿ ಬದಲಾವಣೆ ಮಾಡಿಕೊಡಿರುತ್ತಾರೆ ಎಂದು ಹೇಳುತ್ತಾರೆ. ನಾನು ನನ್ನ

ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನುನನ್ನ ಪ್ರಮಾಣ ಪತ್ರದಲ್ಲಿ ಮಾರಾಟ ಮಾಡಿದ ಬಗ್ಗೆ ಸುಳ್ಳು ಕಥೆಗಳು ಕಟ್ಟಿ ಪ್ರಮಾಣ ಪತ್ರ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿ ದುಡಿಯಲು ಬೇರೆ ಊರಿನಲ್ಲಿ ಇದ್ದ ಕಾರಣ ಇದರ ದೂರುಪಯೋಗ ಪಡೆದುೊಂಡು ನಾನು ಪಹಣಿ ಪತ್ರಿಕೆಗಳನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ವಾದಿಯ ಕಾಕಾ ನನಗೆ ಕಾಗದ ಬರೆದುಕೊಟ್ಟಿರುತ್ತಾನೆ ಎಂದು ಹೇಳುತ್ತಾರೆ. ವಾದಿಯ ಕಾಕಾ ಬರೆದುಕೊಟ್ಟ ಕಾಗದ ಈಗ ನನ್ನ ಹತ್ತಿರ ಉಳಿದಿರುವುದಿಲ್ಲ. ಹರಿದು ಹೋದ ಕಾರಣ ಕಾಗದವನ್ನು ನ್ಯಾಯಾಲಯಲದಲ್ಲಿ ಸಲ್ಲಿಸಲು ಆಗಿರುವುದಿಲ್ಲ. ಈ ವಿಷಯವನ್ನು ನಮ್ಮ ವಕೀಲರಿಗೆ ನಾನು ತಿಳಿಸಿರುತ್ತೇನೆ. ಈ ವಿಷಯವನ್ನು ನಮ್ಮ ವಕೀಲರು ನಮ್ಮ ಪ್ರತಿವಾದ ಪತ್ರದಲ್ಲಿ ಬರೆದಿರುತ್ತಾರೆ ಇಲ್ಲವೋ ಗೊತ್ತಿಲ್ಲ. ವಾದಿಯ ಜಮೀನನ್ನು ಕಬಳಿಸಲು ನಾನು ಸುಳ್ಳು ಕಥೆಗಳನ್ನು ಕಟ್ಟಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಭಾಗದಲ್ಲಿ ಮನೆವಲಯ ಎಂದು ದುಡಿಯುವ ಪದ್ದತಿ ಇರುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲಿಲಸಿರುವುದಿಲ್ಲ. ಈ ಪ್ರಕಾರವಾಗಿ ಯಾವುದೇ ಪದ್ದತಿಗಳು ಇರುವುದಿಲ್ಲ, ವಾದಿಯ ಜಮೀನನ್ನು ಕಬಳಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡು ಹೊತ್ತಿನ ಊಟಕ್ಕಾಗಿ ವಾದಿಯ ಮನೆತನದಲ್ಲಿ ದುಡಿದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದುಡಿದಿದ್ದಕ್ಕಾಗಿ ವಾದಿ ಮನೆತನ ನನಗೆ ಕೂಲಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೂಲಿ ಬೇರೆ, ಮನೆಯಲ್ಲಿ ದುಡಿಯುವುದು ಬೇರೆ ಎಂದು ಹೇಳುತ್ತಾರೆ. ನಾನು ವಾದಿಯ ಮನೆತನದಲ್ಲಿ ದುಡಿದಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.89 ನ್ನು ನಾನು ವಾದಿ ಕುಟುಂಬದಿಂದ ನೊಂದಣಿ ಮುಖಾಂತರ ಖರೀದಿ ಮಾಡಿದ್ದು ದಾವಾ ಆಸ್ತಿಯನ್ನು ಸಹ ನೊಂದಾಯಿತ ದಾಖಲೆಯೊಂದಿಗೆ ಖರೀದಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಕೇವಲ ಪಹಣಿ ಬದಲಾವಣೆ ಮಾಡಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ನೊಂದಾಯಿತ ದಾಖಲೆಗಳನ್ನು ಮಾಡಿಕೊಟ್ಟಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿನ 13, 14, 15, 16 ನೇ ಪ್ಯಾರಾದ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಬ್ಯಾಂಕಿಂದ ದಾವಾ ಅಸ್ತಿಯ ಮೇಲೆ ಸಾಲ ತೆಗೆದುಕೊಳ್ಳುವಾಗ ಬ್ಯಾಂಕ ಅಧಿಕಾರಿಗಳು ಮೂಲ ಮಾಲೀಕರು ಯಾರು ಎಂದು ನೋಟಿಸ್ಸು ನೀಡುತ್ತಾರೆ ಎಂದರೆ ಸಾಕ್ಷಿ ಪಹಣಿ ನನ್ನ ಹೆಸರಿನಲ್ಲಿ ಇರುವ ಕಾರಣ ಯಾವ ನೋಟಿಸ್ಸು ನೀಡುವ ಪ್ರಸಂಗ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಬ್ಯಾಂಕ ಅಧಿಕಾರಿಗಳು ವಕೀಲರಿಗೆ ನೀಡಿ ಆಸ್ತಿಯ ಮಾಲೀಕರು ಯಾರು ಎಂದು ಅಭಿಪ್ರಾಯ ಪಡೆಯುತ್ತಾರೆ ಎಂದರೆ ಸಾಕ್ಷಿ ನಮಗೆ ಸಾಲ ನೀಡಬೇಕಾದರೆ ಈ ಪ್ರಕ್ರಿಯೇ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ನಾನು ದಾವಾ ಆಸ್ತಿಯ ಮಾರುಕಟ್ಟೆ ಮೌಲ್ಯ ತೋರಿಸಲು ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ವಾದಿಯ ಮನೆತನ ನನಗೆ ಮಾರಾಟ ಮಾಡಿಕೊಟ್ಟಿರುವುದಿಲ್ಲ ವಾದಿಯೇ ದಾವಾ ಆಸ್ತಿಗೆ ಮಾಲೀಕನು ಕಬ್ಜೆದಾರನು ಇರುತ್ತಾನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.